


# ಅಪ್ಪ-ಅಮ್ಮನ ಕೈಹಿಡಿದು ನಡೆಸುವ ಪುಟ್ಟ-ಪುಟ್ಟಿ



■ ಸ್ವಯಂಪ್ರಭಾ

ಒಂದು ತಮಾಷೆಯ ವಿಷಯ ನಡೆಯಿತು. ತಮಾಷೆಯಾದರೂ, ಇದು ಕೊಂಚಮಟ್ಟಿಗೆ ವಾಸ್ತವಿಕ ವಿಷಯವೇ ಅನಿಸಿದ್ದರಿಂದ ಇಲ್ಲಿ ಹಂಚಿಕೊಳ್ಳಬಹುದೇನೋ.

ಲಾಕ್‌ಡೌನ್ ನಿಯಮಗಳು ಸಡಿಲಗೊಂಡಿರುವ ಸಂದರ್ಭದಲ್ಲಿ, ಮದುವೆ–ಮುಂಜಿ ಸಮಾರಂಭಗಳು ಮತ್ತೆ ಆರಂಭವಾಗಿವೆ. ಸುಮಾರು ಆರು ತಿಂಗಳುಗಳಿಂದ ಬೀರುಗಳಲ್ಲಿ ಮಡಿಕೆ ಮಡಿಕೆಯಾಗಿ ಅವಿತುಕುಳಿತಿದ್ದ ರೇಶಿಮೆ ಸೀರೆಗಳೆಲ್ಲ ಹೊರಬಂದು, ಸೂರ್ಯರಶ್ಮಿಯ ಕಂಡು ಫಳಫಳನೆ ಹೊಳೆಯುತ್ತಿವೆ. ಪುಟ್ಟಿಯರ ಜರಿಲಂಗಗಳೂ. ಸೀರೆ ಅಂಗಡಿಗಳಲ್ಲಿ, ಒಡವೆ ಅಂಗಡಿಗಳಲ್ಲಿ ನೂಕುನುಗ್ಗಲು ಇರುವುದೂ ಉಂಟು. ಹೀಗೆ ಮಹಿಳೆಯರು, ಹುಡುಗಿಯರು ಎಷ್ಟೊಂದು ರಂಗಾಗಿ ಸಿದ್ಧವಾಗುವಾಗ, ನೀಲಿಮಾ ಮತ್ತು ಶ್ವೇತಾಳ ನಡುವೆ ಪುಟ್ಟ ಹುಸಿ ಜಟಾಪಟಿ ನಡೆಯಿತು.

ನೀಲಿಮಾಳ ಮಗ ಶಾಲೆಗೆ ಹೋಗುವ ಹುಡುಗ. ನೀಲಿಮಾ ಮದುವೆಗೆ ಸಿದ್ಧಳಾಗಿ ಎಷ್ಟು ಹೊತ್ತು ಕಾದರೂ ಶ್ವೇತಾಳ ಸಿದ್ಧತೆ ಮುಗಿಯುವುದೇ ಇಲ್ಲ. ಯಾಕೆಂದರೆ ನೀಲಿಮಾಳ ಮಗ ಬೇಗನೆ ಪ್ಯಾಂಟು ಶರಟು ಸಿಕ್ಕಿಸಿಕೊಂಡು ಬಂದುಬಿಡುತ್ತಾನೆ. ಶ್ವೇತಾಳ ಮಗಳು ಸುನಯನ ಎಂಟನೇ ತರಗತಿ ಹುಡುಗಿ. ಅವಳಿಗೆwಡ ಕೂದಲು ಎಳೆಎಳೆಯಾಗಿ ತೆಗೆದು ತಿರುವಿ ಜಡೆಯಂತೆ ಮಾಡಿ, ತೆಳ್ಳಗೆ ಮೇಕಪ್ ಮಾಡಿ, ಆಭರಣಗಳನ್ನು ತೊಡಿಸುವಷ್ಟರಲ್ಲಿ ಅಮ್ಮನಾದವಳಿಗೆ ದಣಿವಾಗಿಬಿಡುತ್ತದೆ. 'ಈ ಜುಮುಕಿ ಸ್ಟೈಲು ಈಗ ಹಳೆಯದಾಗಿದೆ. ಈಗೇನಿದ್ದರೂ ಅಗಲವಾದ ಲೋಲಾಕು ಹಾಕುತ್ತಾರೆ. ನನಗೆ ಈ ಜುಮುಕಿ ಬೇಡ' ಎಂದು ಸುನಯನ ಅಮ್ಮನೊಂದಿಗೆ ಜಗಳ ಮಾಡುತ್ತಾಳೆ. 'ಇದ್ದಿದ್ದು ಹಾಕ್ಕೊ ಪುಟ್ಟಿ' ಎಂದು ಶ್ವೇತಾ ರಮಿಸುತ್ತಾಳೆ. ಒಟ್ಟಿನಲ್ಲಿ ಅಮ್ಮಮಗಳ ಜಗಳ

> **ನಿರಾಸೆಯ, ಖಿನ್ನತೆಯ ಲೋಕಕ್ಕೆ ಹೋಗದಂತೆ ತಮ್ಮ ಅಪ್ಪ ಅಮ್ಮನ ಕೈ ಹಿಡಿದು ನಡೆಸುವವರು ಮಕ್ಕಳು. ಅವರ ಕಣ್ಣಿನಲ್ಲಿದೆ ಇಂದಿನ ಬೆಳಕು, ನಾಳೆಯ ಕನಸು, ಹಿರಿಯರಿಗೆ ಅಡಿಯಿಡಲು ಬೇಕಾದ ಗಟ್ಟಿನೆಲ.**

ಮುಗಿದು, ಶ್ವೇತಾ ತಾನು ಬನ್ ಹಾಕಿಕೊಂಡು, ಇಸ್ತ್ರಿ ಮಾಡಿಟ್ಟ ಸೆರಗು ಏರಿಸಿಕೊಳ್ಳುವ ಹೊತ್ತಿಗೆ ಉಫ್... ಮೇಕಪ್ ಮತ್ತೆ ಮಾಡಬೇಕಾಗುತ್ತದೆ.

'ನಿಂಗೇನು ಮಗನಿಗೆ ಪ್ಯಾಂಟು ಶರಟು ಸಿಕ್ಕಿಸಿದರೆ ಮುಗಿಯಿತು, ನನಗೆ ಹಾಗಲ್ಲ' ಎಂದು ಶ್ವೇತಾ ದಬಾಯಿಸುವಾಗ, 'ಈಗ ಹುಡುಗರಿಗೂ ಆಯ್ಕೆಗಳಿವೆ, ಕೂದಲು, ದಿರಿಸು, ಅದು ಇದು ಅಂತ ರಂಪ ಮಾಡುತ್ತಾರೆ' ಎಂದು ನೀಲಿಮಾ ಸಮಜಾಯಿಷಿ ನೀಡುತ್ತಾಳೆ. ಜಗಳವೇನೇ ಇರಲಿ, ಹೆಣ್ಣುಮಕ್ಕಳ ಅಮ್ಮಂದಿರು ನಿಜಕ್ಕೂ ಇಂದಿನ ಉಡುಗೆ ತೊಡುಗೆಯ ಫ್ಯಾಷನ್ ಬಗ್ಗೆ ಮಾತ್ರವಲ್ಲ, ಸಾಮಾಜಿಕ ಆಗುಹೋಗುಗಳನ್ನೂ ಬಹಳ ಎಚ್ಚರಿಕೆಯಿಂದ ಕ್ಷಣಕ್ಷಣಕ್ಕೂ ಗಮನಿಸುತ್ತಿರುತ್ತಾರೆ. ಈಗಿನ ರೂಢಿ ಏನು, ಮಕ್ಕಳನ್ನು ಎಷ್ಟರಮಟ್ಟಿಗೆ ಮುಕ್ತವಾಗಿ ಬಿಡಬಹುದು, ಲಭ್ಯವಿರುವ ಅವಕಾಶಗಳೇನು ಎಂಬ ಬಗ್ಗೆ ಕುತೂಹಲದ ಕಣ್ಣುಗಳಲ್ಲಿ ಜಗತ್ತನ್ನು ನೋಡುತ್ತಾರೆ ಎಂಬುದು ಶ್ವೇತಾಳ ಮಾತಿನ ಒಟ್ಟು ಅರ್ಥ.

ಗಾದೆಯೊಂದಿದೆ, 'ಬೆಳೀತಾ ಬೆಳೀತಾ ಹೆಣ್ಮಕ್ಕಳು ಚಂದ, ಬೆಳೆದ ಮೇಲೆ ಗಂಡು ಮಕ್ಕಳು ಚಂದ'. ಆದರೆ ಹೆಣ್ಣಿರಲಿ, ಗಂಡಿರಲಿ, ಮಕ್ಕಳು ನಮ್ಮನ್ನು ಪ್ರಸ್ತುತ ಜಗತ್ತಿಗೆ ಅನ್ವಯಿಸಿ ಬದುಕುವಂತೆ ಪ್ರೇರೇಪಿಸುತ್ತಾರೆ ಎನ್ನುವುದು ಸುಳ್ಳಲ್ಲ. ಮಗುವೊಂದು ಗಂಡ ಹೆಂಡತಿಯ ಜಗಳವನ್ನು ಮೊಟಕು ಮಾಡಿಬಿಡುತ್ತದೆ. ಅಜ್ಜ ಅಜ್ಜಿಯ ಮಡಿ ಮೈಲಿಗೆಯ ಬೈಗುಳ ಮಕ್ಕಳ ಪಾಲಿಗೆ ಇಲ್ಲ. ಸರೀಕರ ನಡುವೆ ಏನೇ ಜಗಳಗಳು ಇರಲಿ, ಪುಟ್ಟಿಯ ಬರ್ತ್‌ಡೇಗೆ ದೊಡ್ಡಮ್ಮ ಉಡುಗೊರೆ ಸಹಿತ ಬರುವರು. ಊಟದ ಪಂಕ್ತಿಯಲ್ಲಿ ಮಗುವೊಂದು ಎಲೆಯಲ್ಲಿ ಅನ್ನ ಚೆಲ್ಲುತ್ತಾ, ಮಾತಿಗೆ ಮಾತು ಸೇರಿಸುತ್ತಾ ಉಣ್ಣುತ್ತಿದ್ದರೆ, ಆ ಪಂಕ್ತಿಯಲ್ಲಿ ಊಟಕ್ಕೆ ಕುಳಿತ ಎಲ್ಲರಿಗೆ ಸುಖಭೋಜನ.

ಮಕ್ಕಳಿಗಾಗಿ ದೊಡ್ಡವರು ಶಾಲೆಯ ಬಗ್ಗೆ ತಿಳಿಯಬೇಕು, ಹೊಸಕೋರ್ಸಿನ ಬಗ್ಗೆ ಅರಿಯಬೇಕು. ಮಗಳು ಹಾಡುತ್ತಿದ್ದರೆ, ಸಂಗೀತದ ಗಂಧಗಾಳಿ ಗೊತ್ತಿಲ್ಲದ ಅಪ್ಪನೂ ಅವಳಿಗೆ ಪ್ರೋತ್ಸಾಹವಾಗಿ ಸಂಗೀತ ಕ್ಲಾಸು ಎಲ್ಲಿದೆ ಎಂದು ವಿಚಾರಿಸುತ್ತಾರೆ. ಆಟದ ಮೈದಾನವೆಲ್ಲಿದೆ, ಈಜಿನ ಕೊಳವೆಲ್ಲಿದೆ, ಮಕ್ಕಳು ನೋಡಬಹುದಾದ ಸಿನಿಮಾ ಯಾವುದು ಬಂದಿದೆ, ನಮ್ಮ ಬಜೆಟ್‌ಗೆ ಹೊಂದುವ ಯಾವ ರೀತಿಯ ಉತ್ತಮ ಸೌಕರ್ಯವನ್ನು ಮಕ್ಕಳಿಗೆ ಕೊಡಬಹುದು ಎಂಬ ಬಗ್ಗೆ ಅಪ್ಪನೂ ಅಮ್ಮನೂ ಸದಾ ತೆರೆದ ಮನಸ್ಸಿನಿಂದ ಯೋಚಿಸುತ್ತಿರುತ್ತಾರೆ.

ನಿರಾಸೆಯ, ಖಿನ್ನತೆಯ ಲೋಕಕ್ಕೆ ಹೋಗದಂತೆ ತಮ್ಮ ಅಪ್ಪ ಅಮ್ಮನ ಕೈ ಹಿಡಿದು ನಡೆಸುವವರು ಈ ಮಕ್ಕಳು. ಅವರ ಕಣ್ಣಿನಲ್ಲಿದೆ ಇಂದಿನ ಬೆಳಕು, ನಾಳೆಯ ಕನಸು, ಹಿರಿಯರಿಗೆ ಅಡಿಯಿಡಲು ಬೇಕಾದ ಗಟ್ಟಿನೆಲ. ಅಂತಹ ಕೋಲ್ಮಿಂಚಿನ ಮಕ್ಕಳಲೋಕದ ಸಾಮರ್ಥ್ಯವನ್ನೂ ಅಗಾಧತೆಯನ್ನೂ ಗಮನಿಸಿದರೆ, ಪೋಷಕರು ಮಾಡುವ ಪಾಲನೆಯ ಕೆಲಸವಾಗಲೀ ಪೋಷಣೆಯ ಕೆಲಸವಾಗಲೀ ಎಷ್ಟೊಂದು ಸಣ್ಣದೆಂದು ಅನಿಸಿಬಿಡುತ್ತದೆ. ಮಕ್ಕಳೆಡೆಗೆ ಕೃತಜ್ಞತೆಯ ನೋಟವೊಂದು, ವಾತ್ಸಲ್ಯದೊಂದಿಗೆ ಹೊಮ್ಮುವುದು. ಹೌದು, ಮಕ್ಕಳೇ ಅಪ್ಪನನ್ನೂ ಅಮ್ಮನನ್ನೂ ಅಪ್‌ಡೇಟ್ ಮಾಡುವುದು. ■